ಉಪಾಧ್ಯಕ್ಷರು:- "ಖಂಡ 2 ರಿಂದ 5 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 2 ರಿಂದ 5 ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಖಂಡ 1 ಇತ್ಯಾದಿ :-

ಉಪಾಧ್ಯಕ್ಷರು:-ಪ್ರಸ್ತಾವ ಏನೆಂದರೆ, "ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು.)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ. ವೀರಪ್ಪ ಮೊಯಿಲಿ(ಮಾನ್ಯ ಮುಖ್ಯ ಮಂತ್ರಿಗಳು):- ಮಾನ್ಯ ಉಪ ಸಭಾಪತಿಯವರೆ,

"1993 ರ ಕರ್ನಾಟಕ ತೆರಿಗೆ ಕಾನೂನುಗಳ(ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ".

ಉಪಾಧ್ಯಕ್ಷರು:- ಪ್ರಸ್ತಾವ ಏನೆಂದರೆ "1993 ರ ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ದೊರೆಯಿತು.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ

ವಿಷಯ:- ಮೈಸೂರು ನಗರದಲ್ಲಿ ಸ್ಫೋಟದಿಂದ ಭಯದ ವಾತಾವರಣ

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ಇವತ್ತು ಬೆಳಿಗ್ಗೆ ಮಾನ್ಯಮುಖ್ಯ ಮಂತ್ರಿಗಳ ಗೈರುಹಾಜರಿಯಲ್ಲಿ ಕೆಲವು ವಿಷಯಗಳನ್ನು ಸಭೆಯ ಗಮನಕ್ಕೆ ತಂದೆವು. ಮೊದಲನೆಯದು ಎಂದರೆ, ಮೈಸೂರಿನಲ್ಲಿ ಭೂ ಕಂಪವಾಗಿ ಭೂಮಿ ಸ್ವಲ್ಪ ಮಟ್ಟಿಗೆ ನಡುಗಿ ಜನರು ಭಯಭೀತರಾಗಿದ್ದಾರೆಂದು ಬಂದಿದೆ. ಇದರ ಬಗ್ಗೆ ಸರ್ಕಾರಕ್ಕೆ ಏನು ಮಾಹಿತಿ ಇದೆ? ಸರ್ಕಾರ ಏನು ಜವಾಬ್ದಾರಿಯುತ ಕ್ರಮವನ್ನು ತಗೆದುಕೊಂಡಿದೆ ಎಂಬ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಒಂದು ಹೇಳಿಕೆಯನ್ನು ಮಾಡಬೇಕೆಂದು ಹೇಳಿದ್ದೆವು. ಇತ್ತೀಚಿಗೆ ಈ ರಾಜ್ಯದಲ್ಲಿ ಬಾಂಬ್ ಗದ್ದಲ ಎಲ್ಲಾ ಕಡೆಯಲ್ಲೂ ನಡೆದಿದೆ. ಈ ಸದನಕ್ಕೂ ಕೂಡ ಬಾಂಬ್ ಇಡುತ್ತೇವೆಂದು ಒಂದು ಬೆದರಿಕೆಯೂ ಬಂದಿತ್ತು. ಈ ಬೆದರಿಕೆಯ ಬಗ್ಗೆ ರಾಜ್ಯ ಸರ್ಕಾರಕ್ಕೆ ಯಾವ ರೀತಿಯ ಮಾಹಿತಿ ಇದೆ? ಏಕೆಂದರೆ ಈ ಶಾಸನಸಭೆಯ ಸದನಕ್ಕೆ ಬಾಂಬ್ ಇಡುತ್ತೇವೆಂದು ಹೇಳಿರುವಂಥ ಮಾತುಗಳು ಅನೇಕ ಕಡೆಯಿಂದ ಬಂದಿರತಕ್ಕ ಭಯೋತ್ಪಾದನೆ, ಫೋನ್ ಕರೆಗಳು ಬಂದಿವೆ. ಆವತ್ತು ಶಾಸನಸಭೆಯನ್ನು ಮುಂದೂಡಿ ಹೊರಗಡೆ ತನಿಖೆ ನಡೆಸಿ ಆಗಬಾರದ ಒಂದು ದೊಡ್ಡ ಗೊಂದಲ ನಡೆಯಿತು. ಅದರ ಬಗ್ಗೆ ಸರ್ಕಾರಕ್ಕೆ

ಏನಾದರೂ ಮಾಹಿತಿ ಇದೆಯೇ ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮ ಏನು ಎಂಬ ಬಗ್ಗೆ ಇವತ್ತು ಬೆಳಿಗ್ಗೆ ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತಂದಿದ್ದೇವೆ. ಮುಖ್ಯ ಮಂತ್ರಿಗಳು ಇದರ ಬಗ್ಗೆ ಏನು ಕ್ರಮ ಕೈಗೊಂಡಿದ್ದಾರೆಂಬ ವಿಚಾರವನ್ನು ಈ ಸದನಕ್ಕೆ ತಿಳಿಸಿ ಒಂದು ಹೇಳಿಕೆಯನ್ನು ಕೊಡಬೇಕು.

ಇದರ ಜೊತೆಗೆ ಮಾನ್ಯ ಮುಖ್ಯ ಮಂತ್ರಿಗಳ ಗಮನವನ್ನು ನಾವು ಸೆಳೆದು ಲಾಕಪ್‌ನಲ್ಲಿ ಆದಂಥ ಎರಡು.....ಸಾವುಗಳ ಬಗ್ಗೆ ಕೇಳಿದ್ದೆವು. ಅದರ ಬಗ್ಗೆ ಒಂದು ಹೇಳಿಕೆಯನ್ನು ಕೊಡುವುದಾಗಿ ಎರಡು ದಿನಗಳ ಹಿಂದೆ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದರು. ಇದುವರೆಗೂ ಅವರು ಹೇಳಿಕೆಯನ್ನು ಕೊಟ್ಟಿಲ್ಲ. ಕೊಡುವುದಾದರೆ ಇವತ್ತು ಸಂಜೆಯೊಳಗಾಗಿ ಕೊಡಬೇಕೆಂದು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಆದ್ದರಿಂದ ರಾಜ್ಯದಲ್ಲಿ ತಲೆದೋರಿರುವ ಭಯೋತ್ಪಾದನೆಯ ಬಗ್ಗೆ ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮ ಏನೆಂಬುದನ್ನು ತಿಳಿಸಬೇಕೆಂದು ತಮ್ಮ ಮೂಲಕ ಕಳಕಳಿಯಿಂದ ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಕೆ. ಹರ್ಷಕುಮಾರಗೌಡ:- ಮಾನ್ಯ ಅಧ್ಯಕ್ಷರೇ, ಮೈಸೂರು ನಗರದಲ್ಲಿ ಜನರು ಭಯಭೀತರಾಗಿರುವ ವಿಚಾರವನ್ನು ಇಲ್ಲಿ ನಾನು ಪ್ರಸ್ತಾವ ಮಾಡಿದಾಗ ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿ ಇರಲಿಲ್ಲ. ಇಡೀ ಮೈಸೂರು ನಗರ, ಶ್ರೀರಂಗಪಟ್ಟಣ, ನಂಜನಗೂಡು ಭಾಗಗಳಲ್ಲಿ ವಾಸಿಸುತ್ತಿರುವ ಜನರು ಇದು ಬಾಂಬ್ ಪ್ರಕರಣವೋ ಅಥವಾ ಭೂಕಂಪವೋ ಎಂದು ಪರದಾಡುವ ಪರಿಸ್ಥಿತಿ ಉದ್ಭವವಾಗಿದೆ. ರಸ್ತೆಗಳಲ್ಲಿನ ವಾಹನಗಳು ಅಲ್ಲಲ್ಲೇ ನಿಂತಿವೆ. ಮನೆಯಲ್ಲಿದ್ದ ಪಾತ್ರೆಗಳು ಅಲ್ಲಾಡಿವೆ. ಕಿಟಕಿಗಳ ಗಾಜುಗಳು ಒಡೆದಿವೆ. ಇದು ಯಾವ ಕಾರಣಕ್ಕಾಗಿ ಹೀಗಾಯಿತು ಎಂಬುದು ಜನರಿಗೆ ಗೊತ್ತಾಗುತ್ತಿಲ್ಲ. ಆದ್ದರಿಂದ ತಮ್ಮಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಈ ದಿಸೆಯಲ್ಲಿ ಜನರ ಮನಸ್ಸಿನಲ್ಲಿ ನೆಮ್ಮದಿ ಮೂಡುವ ಸಲುವಾಗಿ ತಮ್ಮಿಂದ ಒಂದು ಹೇಳಿಕೆ ಬೇಕಾಗುತ್ತದೆಂದು ತಮ್ಮ ಮುಖೇನ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ:- ಮೈಸೂರಿನಲ್ಲಿ ಆದಂಥ ಭೂಕಂಪದ ಬಗ್ಗೆ ನಾನು ಇವತ್ತು ಬೆಳಿಗ್ಗೆ ಪ್ರಸ್ತಾಪ ಮಾಡಿದ್ದೇನೆ. ಇದರ ಜೊತೆಗೆ ಚಿಕ್ಕಮಗಳೂರಿನಲ್ಲಿ 8 ವರ್ಷದ ಹುಡುಗ ಬಾಂಬಿನಿಂದಾಗಿ ಸತ್ತಿರುವ ವಿಚಾರವನ್ನು ಪ್ರಸ್ತಾಪ ಮಾಡಿದ್ದೇನೆ. ಇದು ಬಾಂಬ್‌ನಿಂದ ಆಗಿದೆಯೇ ಅಥವಾ ಹೇಗೆ ಎಂಬುದು ಜನರಿಗೆ ಗೊತ್ತಾಗಬೇಕಾಗಿದೆ. ಸರ್ಕಾರದ ಪರವಾಗಿ ತಾವು ಏನು ಕ್ರಮವನ್ನು ತೆಗೆದುಕೊಳ್ಳುತ್ತಿದ್ದೀರೆಂಬುದನ್ನು ಸ್ವಲ್ಪ ಮಟ್ಟಿಗೆ ಹೇಳಿದಿರಿ. ಆದರೆ ನಿಮ್ಮ ಕೆಲವು ಕಾನ್‌ಫಿಡೆನ್ಷಿಯಲ್ ವಿಚಾರಗಳನ್ನು ಹೇಳಿ ಎಂದು ನಾನು ಕೇಳುವುದಿಲ್ಲ. ಇದುವರೆಗೆ ತಾವು ಎಷ್ಟು ಅರೆಸ್ಟ್ ಮಾಡಿದ್ದೀರಿ? ಮುಂಜಾಗರೂಕತಾ ಕ್ರಮವಾಗಿ ಏನಾದರೂ ಅರೆಸ್ಟ್ ಮಾಡಿದ್ದೀರಾ? ನೀವು ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದು ನಮಗೆ ಗೊತ್ತಾಗಬೇಕಾಗಿದೆ. ಇಡೀ ರಾಜ್ಯದಲ್ಲಿ ಇಂಥ ಒಂದು ಭಯದ ವಾತಾವರಣ ಹುಟ್ಟಿದಾಗ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ?

ನಾನು ಇಲ್ಲಿ ನಿನ್ನೆ ಮಾತನಾಡುವಾಗ ಕೆಲವು ವಿಚಾರಗಳನ್ನು ಹೇಳಿ, ಇವತ್ತು ಕೆಲವು ವಿಚಾರಗಳನ್ನು ತಮ್ಮ ಗಮನಕ್ಕೆ ತಂದೆ. ಆದರೂ ಈ ಸಮಯದಲ್ಲಿ ಇದರ ಬಗ್ಗೆ ಏನು ಪ್ರಸ್ತಾಪ ಮಾಡಲಿಲ್ಲ. ಬೆಳಗಾಮ್‌ನ ವಿಷಯ ಹೇಳಿದೆ. 1992ನೇ ಇಸವಿ ಏಪ್ರಿಲ್ ಒಂದು ಒಂದು ಮನೆಯಲ್ಲಿ ಬಾಂಬ್ ಬ್ಲಾಸ್ಟ್ ಆಯಿತು. Bombs were being manufactured in the house. On the Contrary, we should be ashamed that we have given compensation to the persons who were injured in the house.

ಬಾಂಬ್ ಬ್ಲಾಸ್ಟ್ ಆದರೂ ಆ ಬಗ್ಗೆ ಏನೂ ರಿಪೋರ್ಟ್ ಇಲ್ಲ. ಅವರ ಎನ್‌ಕ್ವೈರಿ ನಡೆಯಲಿಲ್ಲ. You should have enquired as to whether they were, responsible, ಅದೆಲ್ಲಾ

ವಿಚಾರ ಮಾಡದೆ ನಾವು ಕಾಂಪನ್ಸೇಷನ್ ಕೊಟ್ಟಿದ್ದೇವೆ. ಹಾಗೆಯೇ ಮೊನ್ನೆ ಬೆಳಗಾಂಗೆ ಹೋದಾಗ ಕೆಲವು ಜನ ಇದನ್ನು ಪ್ರಸ್ತಾಪ ಮಾಡಿದರು. ಈ ಪ್ರಕಾರದ ಬಾತಾವರಣವಿರುವಾಗ ಮೆಮನ್‌ಬ್ರದರ್ಸ್ ಹುಬ್ಬಳ್ಳಿಗೆ ಬರುತ್ತಾರೆ. ಲೈಸೆನ್ಸ್‌ನ್ನು ರಿನ್ಯೂ ಮಾಡಿಸಿಕೊಂಡು ಹೋಗುತ್ತಾರೆ. ಎರಡು ವರ್ಷಕ್ಕೊಮ್ಮೆ ಆದ್ದರಿಂದ ಇದರಲ್ಲಿ ಇವರ ಲಿಂಕ್ ಇರಬಹುದೋ ಏನೋ; ಅದರ ಬಗ್ಗೆ ಈ ದೃಷ್ಟಿಯಲ್ಲಿ ತಮ್ಮ ಇಂಟಲಿಜೆನ್ಸ್, ತಮ್ಮ ಸರ್ಕಾರ ವಿಚಾರ ಮಾಡಬೇಕಾಗುತ್ತದೆ ಹಾಗೆಯೇ ನಾವು ಈ ಸದನಕ್ಕೆ ನಾಡಿನ ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸರ್ಕಾರ ಯಾವ ರೀತಿ ಕಾರ್ಯಕ್ರಮವನ್ನು ತೆಗೆದುಕೊಂಡಿದೆ, ಎಷ್ಟು ಜನರನ್ನು ಅರೆಸ್ಟ್ ಮಾಡಿದ್ದಾರೆ. ಏನು ಕ್ರಮ ತೆಗೆದುಕೊಂಡಿರುತ್ತಾರೆ ಎನ್ನುವ ಬಗ್ಗೆ ಇಷ್ಟು ವಿವರಗಳನ್ನು ತಾವು ಹೇಳಬೇಕಾಗುತ್ತದೆಂದು ತಮ್ಮಲ್ಲಿ ಒತ್ತಾಯ ಮಾಡುತ್ತೇನೆ.

ವಿಷಯ:- ನರಸಿಂಹರಾಜಪುರ ತಾಲ್ಲೂಕಿನಲ್ಲಿ ಬಾಂಬ್ ಸಿಡಿದು ಒಬ್ಬ ಹುಡುಗಿಯ ಸಾವು

ಶ್ರೀ ಯು.ಕೆ. ಶಾಮಣ್ಣ:- ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದಲ್ಲಿಯೂ ಸಹ ನರಸಿಂಹರಾಜಪುರ ತಾಲ್ಲೂಕಿನಲ್ಲಿ ಒಂದು ಹುಡುಗಿಗೆ ಬಾಂಬ್ ಸಿಡಿದು ಸ್ಥಳದಲ್ಲಿಯೇ ಮೃತಪಟ್ಟಿರುವಂಥ ವಿಚಾರ ನನ್ನ ಗಮನಕ್ಕೆ ಹಾಗೂ ಪತ್ರಿಕೆಗಳಲ್ಲಿ ಈಗಾಗಲೇ ಬಂದಿದೆ. ದಯವಿಟ್ಟು ಈ ಬಗ್ಗೆ ಮೃತಪಟ್ಟಿರುವಂಥ ಹುಡುಗಿಯ ಕುಟುಂಬಕ್ಕೆ ಸಹಾಯವನ್ನು ಸಹ ಸರ್ಕಾರದ ಮುಖಾಂತರ ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಮತ್ತು ಇದರ ಬಗ್ಗೆ ಹೆಚ್ಚಿನ ವಿಚಾರಣೆಯನ್ನು ಸಹ ಸಂಬಂಧಪಟ್ಟವರ ಮೂಲಕ ಮಾಡಿಸಬೇಕೆಂದು ಈ ಸಂದರ್ಭದಲ್ಲಿ ತಮ್ಮನ್ನು ಕೇಳಿಕೊಳ್ಳುತ್ತೇನೆ.

ಶ್ರೀ ವೀರಪ್ಪ ಮೊಯಿಲಿ(ಮುಖ್ಯ ಮಂತ್ರಿಯವರು):- ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ವಾಟಾಳ್ ನಾಗರಾಜ್‌ರವರು, ಈಗ ಮೈಸೂರಿನಲ್ಲಿ ಏನು ಭೂಕಂಪದಂತಹ ಒಂದು ಶಬ್ದ ಬಂದಿತು, ಸ್ಫೋಟವಾಯಿತೆಂದು ಹೇಳಿದ್ದಾರೆ. ಅದರ ಬಗ್ಗೆ ನಾನು ವಿಚಾರ ಮಾಡುತ್ತಿದ್ದೇನೆ. ಅದು ಯಾವುದೆಂದು ಹೇಳಿ ಇನ್ನೂ ನಮಗೆ ವೈಜ್ಞಾನಿಕವಾದಂಥ ವರದಿ ಬಂದಿಲ್ಲ. ಆದರೆ ಕೆಲವು ವರದಿಯಂತೆ ಒಂದು ವಿಮಾನ ಹೋಯಿತು. ಈ ಸಂದರ್ಭದಲ್ಲಿ ಒಂದು ರೀತಿಯಾದ ಶಬ್ದ ಬಂದಿತು ಎಂದು ಹೇಳಿದ್ದಾರೆ. ಇದು ಬಾಂಬ್ ಬ್ಲಾಸ್ಟ್ ಅಲ್ಲ. ಆದರೂ ವರದಿ ಬಂದ ಕೂಡಲೇ ಸದನಕ್ಕೆ ತಿಳಿಸುತ್ತೇನೆ. ಇನ್ನು ನಮ್ಮ ಸನ್ಮಾನ್ಯ ಆರ್.ವಿ.ದೇಶಪಾಂಡೆಯವರು ಮತ್ತು ಯು.ಕೆ. ಶಾಮಣ್ಣನವರು ಹೇಳಿದಂಥದ್ದು ಅದು ನರಸಿಂಹರಾಜಪುರದಲ್ಲಿ ನಮಗೆ ಈಗ ಬಂದ ವರದಿ ಪ್ರಕಾರ ಒಂದು ಮಗು ಬರುತ್ತಿರುವಾಗ ಒಂದು ಸಣ್ಣ ಉಂಡೆ ಸಿಕ್ಕಿತಂತೆ. ಅದನ್ನು ಬಾಯಿಗೆ ಹಾಕಿಕೊಂಡುಬಿಟ್ಟಾಗ ಅದು ಎಕ್ಸ್‌ಪ್ಲೋಡ್ ಆಗಿ ಸ್ಥಳದಲ್ಲೇ ಮೃತಪಟ್ಟಿತು. ಅದನ್ನು ಕಾಡುಹಂದಿ ಕೊಲ್ಲಲಿಕ್ಕೆ ಉಪಯೋಗ ಮಾಡುತ್ತಾರೆ. ಅಂಥ ಬಾಂಬ್ ಎಂದು ನಮಗೆ ವರದಿ ಬಂದಿದೆ. ನಾವು ಮುಂದೆ ಇದರ ಬಗ್ಗೆ ವಿಷದವಾದಂಥ ತನಿಖೆ ಮಾಡಿಸುತ್ತೇವೆ. ಒಂದು ವಿಚಾರ ಬಾಂಬೆನಲ್ಲಿ ನಮಗೆ ಬಂದಿರುವ ವರದಿ ಪ್ರಕಾರ..... May be according to us, this is the report as on today. ಬೊಂಬಾಯಿಂದ ಏನು ಆ ಎಕ್ಸ್‌ಪ್ಲೋಸಿವ್ಸ್ ಇಲ್ಲಿ ಕರ್ನಾಟಕಕ್ಕೆ ಒಂದು ಟಾರ್‌ಗೆಟ್ಡ್ ಏರಿಯಾ ಎಂದು ಹೇಳಿ ಅದು ಬರುತ್ತಿದೆ ಎಂದು ಹೇಳುವಂಥದ್ದು ನಮಗೆ ಬಂದ ವರ್ತಮಾನದ ಪ್ರಕಾರ that has been prevented at the border itself. It has not come to Karnataka. ಕರ್ನಾಟಕದ ಒಂದು ಸರಹದ್ದಿನ ಒಳಗಡೆ ಯಾವುದೇ ಎಕ್ಸ್‌ಪ್ಲೋಸಿವ್ ಇದಕ್ಕೆ ಸಂಬಂಧಪಟ್ಟ ಹಾಗೆ ಬಂದಿಲ್ಲ ಇಲ್ಲಿಯವರೆಗೆ; ಆದರೂ ಕೂಡ ಎಲ್ಲಾ ರೀತಿಯ ಒಂದು ಸಿದ್ಧತೆಯನ್ನು ಮಾಡಿಕೊಂಡಿದ್ದೇವೆ. ಕಡಿಮೆ ಮಾಡುತ್ತಿಲ್ಲ. ಎಲ್ಲಾ ರೀತಿಯ ಸಿದ್ಧತೆಯನ್ನು ಎಲ್ಲಾ ಕಡೆಗೂ ಕೂಡ ಅದಕ್ಕೆ ಏನು ಬೇಕು ಎಕ್ವಿಪ್‌ಮೆಂಟ್ಸ್, ಮತ್ತೊಂದು ಇನ್ನೊಂದು ನಮ್ಮ ಗಡಿಯಲ್ಲಿ ಮತ್ತು ನಮ್ಮ ಸಮುದ್ರದ ಕಡೆ ಎಲ್ಲಾ ಕಡೆ ಕೂಡ ಹಿಂದೆ ಇದ್ದ ಹಾಗೆ ಮುಂಜಾಗರೂಕತೆಯಿಂದ ಹೋಗಿದ್ದೇವೆ. ಯಾವುದೇ ರೀತಿಯಿಂದ ದುಷ್ಕರ್ಮಿಗಳು ನಮ್ಮ ಕರ್ನಾಟಕದ ಒಳಗಡೆ ಪ್ರವೇಶ ಮಾಡಿ ಎಕ್ಸ್‌ಪ್ಲೋಸಿವ್ಸ್‌ನ್ನು,